# ಅಪ್ಪನ ನೆನಪು

ಅಪ್ಪ ಎನ್ನುವ ಪದ ಆಪ್ತವಾದದ್ದು. ಇದೆಲ್ಲಕ್ಕಿಂತಲೂ ಮಿಗಿಲಾದದ್ದು ಕರುಳ ಸಂಬಂಧದ ಅಪ್ಯಾಯತೆ. ಅದರಲ್ಲೂ ಸೈಕಲಾಜಿಕಲ್ ಕಾಂಪ್ಲೆಕ್ಸ್‌ಗಳ ಪ್ರಕಾರ ಹೆಣ್ಣುಮಕ್ಕಳು ತಂದೆಯನ್ನು ಚಿಕ್ಕವಯಸ್ಸಿನಲ್ಲಿ ಆರಾಧಿಸುತ್ತಾ, ಅಂಟಿಕೊಳ್ಳುತ್ತಾ ಬೆಳೆಯುತ್ತಾರೆ. ದೊಡ್ಡವರಾದ ಮೇಲೂ ತಾಯಿಗಿಂತಲೂ ತಂದೆಯೇ ಒಂದು ಪಾಲು ಹೆಚ್ಚು ಇಷ್ಟವಾಗುತ್ತಾನೆ. ಈ ಬಂಧು ಮುಂದೆ ತನ್ನೆಲ್ಲಾ ಸಂಕಟ, ನೋವನ್ನು ಹಂಚಿಕೊಳ್ಳುವ ಆತ್ಮೀಯ ಸಖನಾಗಿಯೂ ತೋರುತ್ತಾನೆ. ಬಹಳಷ್ಟು ಸಂಬಂಧಗಳಲ್ಲಿ ತಂದೆ ಮಗಳ ಸಂಬಂಧ ವಿಶೇಷವಾಗಿಯೇ ತೋರುತ್ತದೆ. ಮನೋವಿಜ್ಞಾನಿ ಕಾರ್ಲ್‌ಯಂಗ್‌ನ ಪ್ರಕಾರ ಎಲೆಕ್ಟ್ರಾ ಕಾಂಪ್ಲೆಕ್ಸ್ 3ರಿಂದ 5 ವಯಸ್ಸಿನ ಹೆಣ್ಣು ಮಕ್ಕಳಲ್ಲಿ ಹುಟ್ಟಿ ಬೆಳೆಯುತ್ತದೆ. ತಾಯಿಯ ಬಗ್ಗೆ ಪ್ರೀತಿಯಿದ್ದರೂ ತಂದೆಯ ಬಗ್ಗೆ ಅತಿ ಹೆಚ್ಚಿನ ಅಭಿಮಾನ. ಫ್ರಾಯ್ಡ್‌ನ ಪ್ರಕಾರ ಈಡಿಪಸ್ ಕಾಂಪ್ಲೆಕ್ಸ್ ತಾಯಿಯನ್ನು ಪ್ರೀತಿಸುತ್ತಾ ತಂದೆಯನ್ನು ದೂರವಿಡುವ ಪ್ರವೃತ್ತಿಯೆಂದಾಗಿದೆ. ವಿಶೇಷವೆಂದರೆ ಗಂಡು ಮಗು ಬೆಳೆಯುತ್ತಾ ತನ್ನ ಈಡಿಪಸ್ ಕಾಂಪ್ಲೆಕ್ಸ್ ನೀಗಿಕೊಂಡಷ್ಟು ಸುಲಭವಾಗಿ ಹೆಣ್ಣುಮಗು ತನ್ನ ಎಲೆಕ್ಟ್ರಾ ಕಾಂಪ್ಲೆಕ್ಸ್‌ನ್ನು ನೀಗಿಕೊಳ್ಳಲಾರಳು ಎಂಬುದು ಮನೋವೈಜ್ಞಾನಿಕ ಸತ್ಯ.

ಈಡಿಪಸ್ ಹುಟ್ಟಿದಾಗ ಡೆಲ್ಫಿಯ ಅಪೊಲೊದೇವತೆ ಈ ಮಗು ತಂದೆಯನ್ನು ಕೊಂದು ತಾಯಿಯನ್ನು ವರಿಸುತ್ತದೆ ಎಂದು ಭವಿಷ್ಯವಾಣಿ ನುಡಿಯುತ್ತದೆ. ಇದನ್ನು ಕೇಳಿದ ಅವನ ತಂದೆ ದೊರೆ ಲೇಯಸ್ ಮತ್ತು ತಾಯಿ ಜೊಕಾಸ್ಟಾ ಆತಂಕಗೊಂಡು ಮಗುವನ್ನು ಬೆಟ್ಟದ ಮೇಲೆ ಬಿಟ್ಟುಬರುವಂತೆ ಸೇವಕರಿಗೆ ಆಜ್ಞಾಪಿಸುತ್ತಾರೆ. ಆ ಮಗು ಕುರಿಗಾಹಿಯ ಕೈ ಸೇರಿ ಅವನ ಕೈಯಿಂದ ಕೊರಿಂತ್‌ನ ರಾಜ ದಂಪತಿಗಳಿಗೆ ಸೇರುತ್ತದೆ. ಮೊಳೆ ಹೊಡೆದು ಬಂಧಿಸಿದ್ದ ಕಾಲುಗಳು ಊದಿಕೊಂಡಿದ್ದರಿಂದ ಅವನನ್ನು ಈಡಿಪಸ್ ಎಂದು ಕರೆಯಲಾಗುತ್ತದೆ. ರಾಜ್ಯಯೋಗ್ಯನಾಗಿ ಬೆಳೆದಂತಹ ಈಡಿಪಸ್‌ಗೆ ಕುಡುಕನೊಬ್ಬ ಕುಡಿದ ಅಮಲಿನಲ್ಲಿ ಜನ್ಮರಹಸ್ಯ ತಿಳಿಸಿಬಿಡುತ್ತಾನೆ. ತನ್ನ ಮೂಲ ಹುಡುಕಿಕೊಂಡು ಹೊರಟ ಈಡಿಪಸ್‌ಗೆ ಡೆಲ್ಫಿಯ ದೇವವಾಣಿ ತಂದೆಯ ಬಗ್ಗೆ ತಿಳಿಸದೆ ಅವನು ತಾಯಿಯನ್ನು ವರಿಸುವ ಬಗ್ಗೆ ಭವಿಷ್ಯ ನುಡಿಯುತ್ತದೆ. ಪಾಪಕರ್ಮ ಮಾಡಲಿಚ್ಛಿಸದೆ ತನ್ನನ್ನು ಪೊರೆದವರಿಂದ ದೂರ ಹೊರಟರೂ ಅವನ ವಿಧಿ ಬಿಡದೆ ಹಿಂಬಾಲಿಸುತ್ತದೆ. ನಿಜದ ತಂದೆ ಲೇಯಸ್ ರಥದಲ್ಲಿ ಎದುರಾಗುತ್ತಾನೆ. ಪರಸ್ಪರರಿಗೆ ದಾರಿ ಬಿಡುವ ವಿಷಯದಲ್ಲಿ ಕದನವಾಗಿ ಈಡಿಪಸ್ ಲೇಯಸ್‌ನನ್ನು ಕೊಂದುಬಿಡುತ್ತಾನೆ. ಡೆಲ್ಫಿಯ ದೇವವಾಣಿ ಅರ್ಧ ನಿಜವಾಗುತ್ತದೆ. ಮುಂದೆ ಥೀಬ್ಸ್‌ಗೆ ಕಾಲಿಟ್ಟು ಸಿಂಹದ ಶರೀರ, ಮಾನವ ತಲೆಯನ್ನುಳ್ಳ ಸ್ಫಿಂಕ್ ಕೇಳಿದ ಪ್ರಶ್ನೆಗೆ ಉತ್ತರಕೊಟ್ಟು ರಾಜ್ಯವನ್ನು ಶಾಪಮುಕ್ತವಾಗಿಸುತ್ತಾನೆ. ಸಂತಸಗೊಂಡ ಪ್ರಜೆಗಳು ಲೇಯಸ್‌ನನ್ನು ಕಳಕೊಂಡು ವಿಧವೆಯಾಗಿದ್ದ ಜೊಕಾಸ್ಟಾಳ ಜೊತೆ ಇವನ ವಿವಾಹ ನಡೆಸುತ್ತಾರೆ. ಹೀಗೆ ಅರಿವಿಲ್ಲದೆ ಮದುವೆಯಾದ ಈಡಿಪಸ್‌ಗೆ ನಾಲ್ಕು ಜನ ಮಕ್ಕಳು ಹುಟ್ಟುತ್ತಾರೆ. ಕಾಲಾನಂತರ ರಾಜ್ಯಕ್ಕೆ ದುರ್ಭಿಕ್ಷ ಬಂದಾಗ, ಮಳೆಬೆಳೆ ಇಲ್ಲದೆ ಜನತೆ ನರಳುವಾಗ ಈ ಎಲ್ಲಾ ಪಾಪಗಳ ಮೂಲ ತಾನೇ ಎಂಬ ಸಂಗತಿ ಅರಿವಾಗುತ್ತದೆ. ಜೊಕಾಸ್ಟಾ ಈ ಸತ್ಯ ತಿಳಿದು ನೇಣುಹಾಕಿಕೊಂಡರೆ ಈಡಿಪಸ್ ತನ್ನ ಕಣ್ಣನ್ನು ಚುಚ್ಚಿಕೊಂಡು ಪಾಪ ಪ್ರಜ್ಞೆಯಿಂದ ನರಳುತ್ತಾನೆ. ಫ್ರಾಯ್ಡ್ ಈ ಪಾಪಪ್ರಜ್ಞೆಯಿಂದ ನರಳುವ ಮನಃಸ್ಥಿತಿಯನ್ನು ಈಡಿಪಸ್ ಕಾಂಪ್ಲೆಕ್ಸ್ ಎಂದು ಕರೆದ.

ಎಲೆಕ್ಟ್ರಾ ಅಗಮೆನ್ನಾನ್ ಮತ್ತು ಕ್ಲೈಟಮ್ನೆಸ್ಟ್ರಾ ದಂಪತಿಯ ಮಗಳಾಗಿದ್ದಾಳೆ. ಅಗಮೆನ್ನಾನ್ ತನ್ನ ತಮ್ಮ ಮನಿಲಾಸ್‌ನ ಹೆಂಡತಿ ಹೆಲನ್‌ಳನ್ನು ಪಾರಿಸ್‌ಗೆ ಹಾರಿಸಿಕೊಂಡು ಹೋದಾಗ ಟ್ರಾಯ್‌ನ ಮೇಲೆ ಯುದ್ಧಕ್ಕೆ ಹೊರಡುತ್ತಾನೆ. ಯುದ್ಧದ ಹಡಗುಗಳು ಗಾಳಿ ಬೀಸದೆ ನಿಂತುಬಿಟ್ಟಾಗ ಪ್ರವಾದಿಯೊಬ್ಬನು ಹೇಳಿದಂತೆ ತನ್ನ ಮಗಳಾದ ಇಫಿಜೀನಿಯಾಳನ್ನು ದೇವತೆ ಆರ್ಟೆಮಿಸ್‌ಗೆ ಬಲಿ ಕೊಡುತ್ತಾನೆ. ಮಗಳನ್ನು ಬಲಿ ಕೊಟ್ಟ ಸುದ್ದಿ ಕೇಳಿ ಸಿಟ್ಟುಗೊಂಡ ಕ್ಲೈಟಮ್ನೆಸ್ಟ್ರಾ ತನ್ನ ಪ್ರಿಯತಮನ ಜೊತೆ ಸೇರಿ ಜಯಶಾಲಿಯಾಗಿ ಬಂದ ಅಗಮೆನ್ನಾನ್‌ನ್ನು ಬಲೆಯಿಂದ ಬಂಧಿಸಿ ಕೊಡಲಿಯಿಂದ ಕೊಚ್ಚಿ ಕೊಲ್ಲುತ್ತಾಳೆ. ಇದನ್ನು ನೋಡಿದ ಎಲೆಕ್ಟ್ರಾ ತನ್ನ ಅಣ್ಣ ಒರೆಸ್ಟ ಡೆಲ್ಫಿಯ ದೈವವಾಣಿಯಿಂದ ಪ್ರೇರಿತನಾಗಿ ತಾಯಿ ಮತ್ತು ಅವನ ಪ್ರಿಯಕರನನ್ನು ಕೊಲ್ಲಲು ಹೊರಟಾಗ ಸಹಕರಿಸುತ್ತಾಳೆ. ಹೀಗೆ ತಾಯಿಯನ್ನು ಕೊಲ್ಲಲು ಸಹಕರಿಸಿದ ಎಲೆಕ್ಟ್ರಾ ಹೆಸರನ್ನು ಎಲೆಕ್ಟ್ರಾ ಕಾಂಪ್ಲೆಕ್ಸ್ ಎಂದೇ ಕರೆಯಲಾಗಿದೆ.

ಈ ಎರಡೂ ಕಾಂಪ್ಲೆಕ್ಸ್‌ಗಳನ್ನು 70ರ ದಶಕದ ಸಾಹಿತ್ಯದಲ್ಲಿ ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗಿದೆ. ಗಿರೀಶ್ ಕಾರ್ನಾಡ್ ತಮ್ಮ ಯಯಾತಿ ನಾಟಕದಲ್ಲಿ ಮಹತ್ವಾಕಾಂಕ್ಷಿ ತಂದೆಯ ಎದುರು ಅಧೀನನಾಗಿ ನಿಂತು ಬದುಕಿನ ಅರ್ಥ ಹುಡುಕಲೆತ್ನಿಸುವ ಪುರುವಿನ ಪಾತ್ರದಲ್ಲಿ ಈ ಪ್ರಯೋಗ ನಡೆಸುತ್ತಾರೆ. ಮಗನ ಯೌವನವನ್ನು ಪಡೆದು ಭೋಗವನ್ನು ಅನುಭವಿಸ ಹೊರಟ ಯಯಾತಿಯಲ್ಲಿ ಈ ಕಾಂಪ್ಲೆಕ್ಸ್‌ನ್ನು ಕಾರ್ನಾಡರು ಹುಡುಕ ಹೊರಡುತ್ತಾರೆ. ಇದೊಂದು ಮಹತ್ವದ ನಾಟಕವಾಗಿ ಇಂದಿಗೂ ಸಹ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.

ಇತ್ತೀಚೆಗೆ ತಾನೇ ಜ.ನಾ. ತೇಜಶ್ರೀ ಕ್ಯಾಪ್ಟನ್ ಕವಿತೆಗಳು ಎಂಬ ವಿಶೇಷವಾದ ಕವನ ಸಂಕಲನ ಪ್ರಕಟಗೊಂಡಿದೆ. ಹೆಣ್ಣುಮಕ್ಕಳ ಪಾಲಿಗೆ ಎಲ್ಲಾ ಕಾಲಕ್ಕೂ ತಾಯಿಗಿಂತಲೂ ಒಂದು ಪಟ್ಟು ಹೆಚ್ಚಿಗೆ ಅನುಬಂಧ ಉಳಿಸಿಕೊಳ್ಳುವವನು ತಂದೆಯೇ ಆಗಿರುತ್ತಾನೆ. ಮಗಳ ಪಾಲಿಗೆ ಬಂಧು, ಆತ್ಮೀಯ ಸಖ ಈ ತಂದೆಯಾಗಿದ್ದಾನೆ. ಗತಿಸಿದ ತಂದೆಯನ್ನು ನೆನಪುಗಳ ಮೂಲಕ ಹಿಂಬಾಲಿಸುತ್ತಾ ನೆನಪಿನಲ್ಲುಳಿದ ಸಖ್ಯವನ್ನು ಮಗಳಾಗಿ, ಲೇಖಕಿಯಾಗಿ ಮತ್ತೆ ಮತ್ತೆ ಸಂದರ್ಶಿಸುವ ಈ ಕವಿತೆಗಳು ಆಪ್ತವೆನಿಸುತ್ತವೆ. ನಮ್ಮೊಳಗಿನ ನಿಗೂಢ ತಂದೆಯನ್ನು ಕಾಣಲೆತ್ನಿಸುವಂತೆ ಈ ರಚನೆಗಳು ಮಾಡುತ್ತವೆ. ತನ್ನ ಪ್ರೇಮವನ್ನು, ತನ್ನ ಜವಾಬ್ದಾರಿಯನ್ನು ನಸುನಗುತ್ತಾ ನಿರ್ವಹಿಸಿದ ಪ್ರವಾದಿಯಂತಹ ತಂದೆಯನ್ನು ಕ್ಯಾಪ್ಟನ್ ಎಂದು ಹೆಸರಿಸಿರುವುದು ಹಾಗೂ ಆ ನೆನಪುಗಳಿಗೆ ಕ್ಯಾಪ್ಟನ್ ಕವಿತೆಗಳೆಂದು ಕರೆದಿರುವುದು ಅತ್ಯಂತ ಆಪ್ತವೆನಿಸುತ್ತದೆ. ತಂದೆಯೆಂಬ ಆಪ್ತ ಜೀವವನ್ನು ಕಾಣುವುದು, ಆರಾಧಿಸುವುದು ಮಗಳ ನೆನಪೆಂಬ ಋಣವನ್ನು ಹಗುರ ಮಾಡಿಕೊಳ್ಳುವ ದಾರಿಯೂ ಹೌದು.

■ **ಅಮೃತಮತಿ**

## ಮಾತೇ ಮುತ್ತು

- ಹಣವನ್ನು ಕೊಡುವಾಗ ಸ್ನೇಹ, ತೆಗೆದುಕೊಳ್ಳುವಾಗ ಶತ್ರುತ್ವ ಉಂಟಾಗುತ್ತದೆ.
  —ಶುಕ್ರನೀತಿ
- ಸಜ್ಜನರ ನಡುವೆ ದುಃಖದ ಬಾಗಿಲುಗಳು ತಾವಾಗಿಯೇ ತೆರೆದುಕೊಳ್ಳುತ್ತವೆ.
  —ಕಾಳಿದಾಸ
- ಶ್ರದ್ಧೆ ಪರ್ವತವನ್ನೇ ಚಲಿಸಬಲ್ಲುದಾದರೆ ಪ್ರೇಮದ ಶಕ್ತಿಯೇನು ಕಡಿಮೆಯೇ?
  —ಫೇಬರ್
- ಸುಖ ದುಃಖಗಳನ್ನು ನಾವು ಅನುಭವಿಸುವ ಮೊದಲೇ ನಾನು ಅವುಗಳನ್ನು ಆರಿಸಿಕೊಂಡಿರುತ್ತೇನೆ.
  —ಖಲೀಲ್ ಗಿಬ್ರಾನ್
- ಯಶಸ್ಸಿನ ಶೀತಲ ಬೆಳದಿಂಗಳು ಬೇಕಾಗಿದ್ದರೆ ಪ್ರಯತ್ನವೆಂಬ ಅಖಂಡ ಚಂದ್ರನನ್ನು ಸದಾ ಬೆಳಗಿಸುತ್ತಿ ಬೇಕು.
  —ಸ್ವಾಮಿ ವಿವೇಕಾನಂದ
- ಪ್ರೇಮವೆಂಬುದು ಅನೇಕ ದುಃಖಗಳಿಂದ ಕೂಡಿದ ಔಷಧವಿಲ್ಲದ ರೋಗ.
  —ಡ್ಯಾಬನಿಯಲ್
- ಉತ್ಸಾಹ ಶೂನ್ಯತೆಯು ಎಲ್ಲ ದುಃಖಗಳಿಗೂ ತೆರೆದ ಬಾಗಿಲು.
  —ಸೋಮದೇವ
- ಕಾಲ ಅನಂತದ ಕನ್ನಡಿ.
  —ಪ್ಲೇಟೊ